<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 791/2022 ಸಿಡಬ್ಲೂ: 3 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 20-06-2025

ಹೆಸರು : ವಜೀರಪ್ಪ

ತಂದೆ ಹೆಸರು : ಬುಗಪ್ಪ

ವಯಸ್ಸು : 35 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಮೈಲ್ ವಾರ್

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಗುನ್ನೆ ಸ್ಥಳದ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಗುರುತಿನ ಹೆಬ್ಬೆಟ್ಟನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸಾಕ್ಷಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿಯಿತು. ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನುನ ನಿ ಪಿ 2 ಎಂದು ಗುರುತಿಸಲಾಯಿತು. ನಿ ಪಿ 1 ಕ್ಕೆ ಸಹಿಯನ್ನು ಧ್ಯಾಮವ್ವ ಗುಡಿಯ ಹತ್ತಿರ ಮಾಡಿದ್ದೇನೆ. ನಮ್ಮ ಜೊತೆ 4 ರಿಂದ 5 ಜನರು ಇದ್ದರು. ಪಂಚನಾಮೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ಪಂಚನಾಮೆಯಲ್ಲಿ ಭಾಗಿಯಾಗಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ಪಾಟೀಸವಾಲುಃ**</u> ಮಾನ್ಯ ಸ.ಸ.ಅ ರವರಿಂದ:

ದಿಃ13-03-2022 ರಂದು ಬೆಳಿಗ್ಗೆ 09.30 ಗಂಟೆಯಿಂದ 10.30 ಗಂಟೆಯವರೆಗೆ ನನ್ನ ಮತ್ತು ಚಾ ಸಾ 2 ರವರ ಸಮಕ್ಷಮದಲ್ಲಿ ಚಾ ಸಾ 8 ರವರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ

ಸರಿಯಿಲ್ಲ. ಪಂಚನಾಮೆಯಲ್ಲಿ ಭಾಗಿಯಾಗಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**